**SUBJECT CODE : 422**

# General Studies—4

## ಸಾಮಾನ್ಯ ಅಧ್ಯಯನ—4

**2021**

**Time: 3 Hours** | **Maximum Marks: 250**

**ಸಮಯ : 3 ಗಂಟೆಗಳು** | **ಗರಿಷ್ಠ ಅಂಕಗಳು : 250**

### SPECIFIC INSTRUCTIONS

*(i)* **Candidates have to attempt all questions.**

*(ii)* **Marks carried by each question are indicated at its end.**

1. **"My religion is very simple. My religion is kindness" says His Holiness the 14th Dalai Lama. Elaborate the values that can be inculcated from his life and teachings. (Not more than 300 words)**

   ಪರಮಪೂಜ್ಯ 14ನೇ ದಲೈಲಾಮಾರವರು "ನನ್ನ ಧರ್ಮ ಬಹಳ ಸರಳ: ನನ್ನ ಧರ್ಮ ದಯೆ (ಕರುಣೆ)" ಎಂದು ತಿಳಿಸಿದ್ದಾರೆ. ಅವರ ಜೀವನ ಮತ್ತು ಉಪದೇಶಗಳಿಂದ ನಾವು ಯಾವ ಮೌಲ್ಯಗಳನ್ನು ಬೇರೂರಿಸಿಕೊಳ್ಳಬಹುದು ಎಂಬುದನ್ನು ವಿಸ್ತಾರವಾಗಿ ಬರೆಯಿರಿ. (300 ಪದಗಳಿಗೆ ಮೀರದಂತೆ ಉತ್ತರಿಸಿ) **[20]**

2. **Explain the principles of Corporate Governance and discuss about any three Indian Companies in relation to their best corporate practices. (Not more than 300 words)**

   ಸಾಂಸ್ಥಿಕ ಆಡಳಿತದ ತತ್ವಗಳನ್ನು ವಿವರಿಸಿ ಹಾಗೂ ಯಾವುದೇ ಮೂರು ಭಾರತೀಯ ಕಂಪೆನಿಗಳ ಅತ್ಯುತ್ತಮ ಆಚರಣೆ (**corporate practices**) ಗಳಿಗೆ ಸಂಬಂಧಿಸಿದಂತೆ ಚರ್ಚಿಸಿ. (300 ಪದಗಳಿಗೆ ಮೀರದಂತೆ ಉತ್ತರಿಸಿ) **[20]**

**3.** **Some employees in an organisation have found that their organisation is engaged in illegal activities, which they personally disapprove. Should they blow the whistle? Or should they follow orders from the top officials? Suggest measures to resolve such Ethical Dilemmas. (Not more than 300 words)**

ಒಂದು ಸಂಸ್ಥೆಯಲ್ಲಿನ ಕೆಲವು ನೌಕರರು, ತಾವು ವೈಯಕ್ತಿಕವಾಗಿ ಒಪ್ಪಿಕೊಳ್ಳದ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಅವರ ಸಂಸ್ಥೆಯು ತೊಡಗಿಕೊಂಡಿರುವುದನ್ನು ಕಂಡುಕೊಂಡಿದ್ದಾರೆ. ಹಾಗಾದರೆ ಅವರು ನೌಕರರನ್ನು ಎಚ್ಚರಿಸಬೇಕೆ? ಅಥವಾ ಉನ್ನತಾಧಿಕಾರಿಗಳ ಆದೇಶಗಳನ್ನು ಪಾಲಿಸಬೇಕೆ? ಇಂಥ ನೈತಿಕ ಸಂದಿಗ್ಧತೆಗಳನ್ನು ಪರಿಹರಿಸಲು ಸಲಹೆಗಳನ್ನು ಸೂಚಿಸಿ. **(300 ಪದಗಳಿಗೆ ಮೀರದಂತೆ ಉತ್ತರಿಸಿ)** **[20]**

**4.** **Explain the role of family, society and educational institutions in inculcating values. (Not more than 300 words)**

ಮೌಲ್ಯಗಳನ್ನು ಬೆಳೆಸುವಲ್ಲಿ ಕುಟುಂಬ, ಸಮಾಜ ಮತ್ತು ಶಿಕ್ಷಣ ಸಂಸ್ಥೆಗಳ ಪಾತ್ರವನ್ನು ವಿವರಿಸಿ. **(300 ಪದಗಳಿಗೆ ಮೀರದಂತೆ ಉತ್ತರಿಸಿ)** **[20]**

**5.** **Critically explain integrity, impartiality and its significant role with reference to public administration. (Not more than 150 words)**

ಸಾರ್ವಜನಿಕ ಆಡಳಿತದಲ್ಲಿ ಸಮಗ್ರತೆ**(integrity)**, ನಿಷ್ಪಕ್ಷಪಾತ ಮತ್ತು ಅದರ ಪ್ರಮುಖ ಪಾತ್ರಗಳನ್ನು ವಿಮರ್ಶಾತ್ಮಕವಾಗಿ ವಿವರಿಸಿ. **(150 ಪದಗಳಿಗೆ ಮೀರದಂತೆ ಉತ್ತರಿಸಿ)** **[10]**

**6.** **Critically evaluate dedication for economically weaker section in the context of Women upliftment. (Not more than 150 words)**

ಆರ್ಥಿಕವಾಗಿ ದುರ್ಬಲವಾಗಿರುವ ಮಹಿಳೆಯರ ಉದ್ಧಾರಕ್ಕಾಗಿ ಅರ್ಪಣಾ ಭಾವನೆಯನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಿರಿ. **(150 ಪದಗಳಿಗೆ ಮೀರದಂತೆ ಉತ್ತರಿಸಿ)** **[10]**

**7.** **Differentiate between the value of impartiality and non-partisanship in public administration. (Not more than 250 words)**

ಸಾರ್ವಜನಿಕ ಆಡಳಿತದಲ್ಲಿ ನಿಷ್ಪಕ್ಷಪಾತ ಮತ್ತು ತಟಸ್ಥತೆಯ ಮೌಲ್ಯದನಡುವಣ ವ್ಯತ್ಯಾಸವನ್ನು ಬರೆಯಿರಿ. **(250 ಪದಗಳಿಗೆ ಮೀರದಂತೆ ಉತ್ತರಿಸಿ)** **[15]**

**8.** **Explain the values of tolerance, impartiality and objectivity in religious context. (Not more than 250 words)**

ಸಹಿಷ್ಣುತೆ, ನಿಷ್ಪಕ್ಷಪಾತ ಮತ್ತು ವಸ್ತುನಿಷ್ಠತೆಯ ಮೌಲ್ಯಗಳನ್ನು ಧಾರ್ಮಿಕ ಸಂದರ್ಭದಲ್ಲಿ ವಿವರಿಸಿ. **(250 ಪದಗಳಿಗೆ ಮೀರದಂತೆ ಉತ್ತರಿಸಿ)** **[15]**

**9.** **Critically analyse the concept of dedication and objectivity in public administration. (Not more than 250 words)**

ಸಾರ್ವಜನಿಕ ಆಡಳಿತದಲ್ಲಿ ಅರ್ಪಣಾ ಭಾವನೆ ಮತ್ತು ವಸ್ತುನಿಷ್ಠತೆಯನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ. **(250 ಪದಗಳಿಗೆ ಮೀರದಂತೆ ಉತ್ತರಿಸಿ)** **[15]**

**10. You are an Officer in charge of authenticating the documents of people who lost their life support in a natural disaster. An illiterate senior citizen comes to meet you one day anticipating your support in getting the benefit proclaimed by the Government. After verifying the papers produced by him, you understand that they are not the documents as expected to be a beneficiary. You are not ready to reject his request because in reality he has no support for survival other than what he has lost in the disaster. This leads to a conflicting situation of either to support him or not.**

**How do you resolve this situation? Explain . (Not more than 300 words)**

ಪ್ರಕೃತಿ ವಿಕೋಪಕ್ಕೆ ಗುರಿಯಾದ ಜನರು ತಮ್ಮ ಜೀವನ ನಿರ್ವಹಣೆಯ ಆಧಾರವನ್ನು ಕಳೆದುಕೊಂಡವರ ದಾಖಲಾತಿಗಳನ್ನು ಪರೀಕ್ಷಿಸಿ ದೃಢೀಕರಿಸುವ ಕಚೇರಿಯಲ್ಲಿ ನೀವು ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವಿರಿ. ಒಂದು ದಿನ ಅನಕ್ಷರಸ್ಥ ಹಿರಿಯ ನಾಗರಿಕರೊಬ್ಬರು ನಿಮ್ಮನ್ನು ಭೇಟಿ ಮಾಡಿ, ಸರ್ಕಾರದಿಂದ ಬರುವ ಸವಲತ್ತುಗಳನ್ನು ಪಡೆಯಲು ನಿಮ್ಮ ಸಹಾಯವನ್ನು ನಿರೀಕ್ಷಿಸುತ್ತಿದ್ದಾರೆ. ಅವರು ತಂದಿರುವ ದಾಖಲಾತಿಗಳನ್ನು ಪರಿಶೀಲಿಸಿದ ಬಳಿಕ ಸರ್ಕಾರವು ನೀಡುತ್ತಿರುವ ಸವಲತ್ತುಗಳನ್ನು ಪಡೆಯಲು ಸಾಧ್ಯವಿಲ್ಲವೆಂದು ನಿಮಗೆ ತಿಳಿದು ಬರುತ್ತದೆ. ವಾಸ್ತವದಲ್ಲಿ ಆ ಹಿರಿಯ ನಾಗರಿಕರು ಪ್ರಕೃತಿ ವಿಕೋಪದಲ್ಲಿ ತಾವು ಕಳೆದುಕೊಂಡಿರುವುದಷ್ಟೇ ಜೀವನ ನಿರ್ವಹಣೆಗೆ ಆಧಾರವಾಗಿರುತ್ತದೆ. ಆದ್ದರಿಂದ, ಆತನ ಮನವಿಯನ್ನು ತಿರಸ್ಕರಿಸಲು ನೀವು ಸಿದ್ಧರಾಗಿಲ್ಲ. ಈ ಸನ್ನಿವೇಶವು ಹಿರಿಯ ನಾಗರಿಕರಿಗೆ ಸಹಾಯ ಮಾಡಬೇಕೆ? ಅಥವಾ ಇಲ್ಲವೇ ಎಂದು ನಿಮ್ಮಲ್ಲಿ ಗೊಂದಲ ಸೃಷ್ಟಿಸಿದೆ.

ನೀವು ಈ ಸನ್ನಿವೇಶವನ್ನು ಹೇಗೆ ಬಗೆಹರಿಸುವಿರಿ?ವಿವರಿಸಿ. **(300 ಪದಗಳಿಗೆ ಮೀರದಂತೆ ಉತ್ತರಿಸಿ)** **[20]**

**11. Explain attitude and its structure. Describe the main component models of attitude. (Not more than 150 words)**

ಮನೋಧರ್ಮ ಮತ್ತು ಅದರ ಸ್ವರೂಪವನ್ನು ವಿವರಿಸಿ. ಮನೋಧರ್ಮದ ಮುಖ್ಯ ಘಟಕ ಮಾದರಿಗಳನ್ನು ವಿವರಿಸಿ. **(150 ಪದಗಳಿಗೆ ಮೀರದಂತೆ ಉತ್ತರಿಸಿ)** **[10]**

**12. Explain political attitudes and factors influencing political attitudes. (Not more than 150 words)**

ರಾಜಕೀಯ ಮನೋಭಾವಗಳು ಮತ್ತು ರಾಜಕೀಯ ಮನೋಭಾವಗಳ ಮೇಲೆ ಪ್ರಭಾವ ಬೀರುವ ಅಂಶಗಳನ್ನು ವಿವರಿಸಿ. **(150 ಪದಗಳಿಗೆ ಮೀರದಂತೆ ಉತ್ತರಿಸಿ)** **[10]**

**13. What is persuasion? How can attitudes be changed using messages? (Not more than 150 words)**

ಮನವೊಲಿಸುವಿಕೆ ಎಂದರೇನು? ಸಂದೇಶಗಳನ್ನಾಧರಿಸಿ ಮನೋಭಾವಗಳನ್ನು ಪರಿವರ್ತಿಸುವ ಬಗೆ ಹೇಗೆ? **(150 ಪದಗಳಿಗೆ ಮೀರದಂತೆ ಉತ್ತರಿಸಿ)** **[10]**

14. **Explain Social influence by demand. (Not more than 250 words)**
ಬೇಡಿಕೆಯಿಂದಾಗುವ ಸಾಮಾಜಿಕ ಪ್ರಭಾವವನ್ನು ವಿವರಿಸಿ. (250 ಪದಗಳಿಗೆ ಮೀರದಂತೆ ಉತ್ತರಿಸಿ) [15]

15. **What are the administrative problems faced by the people? How do you overcome these problems by effective administration? (Not more than 300 words)**

ಜನರು ಎದುರಿಸುವ ಆಡಳಿತಾತ್ಮಕ ಸಮಸ್ಯೆಗಳು ಯಾವುವು? ಪರಿಣಾಮಕಾರಿ ಆಡಳಿತವನ್ನು ನೀಡುವ ಮೂಲಕ ಈ ಸಮಸ್ಯೆಗಳನ್ನು ಹೇಗೆ ಹೋಗಲಾಡಿಸುವಿರಿ? (300 ಪದಗಳಿಗೆ ಮೀರದಂತೆ ಉತ್ತರಿಸಿ) [20]

16. **What is emotional intelligence? Explain the utilities and applications of emotional intelligence in administration and governance. (Not more than 300 words)**

ಭಾವನಾತ್ಮಕ ಬುದ್ಧಿವಂತಿಕೆ ಎಂದರೇನು? ಆಡಳಿತದಲ್ಲಿ ಮತ್ತು ಆಡಳಿತ ನಿರ್ವಹಣೆಯಲ್ಲಿ ಭಾವನಾತ್ಮಕ ಬುದ್ಧಿವಂತಿಕೆಯ ಉಪಯುಕ್ತತೆಗಳನ್ನು ಮತ್ತು ಇದರ ಅನ್ವಯಿಸುವಿಕೆಗಳನ್ನು ವಿವರಿಸಿ. (300 ಪದಗಳಿಗೆ ಮೀರದಂತೆ ಉತ್ತರಿಸಿ) [20]

* * *